ಸಿಸಿ ನಂಃ2671/2021

ಸಿ.ಡಬ್ಲೂ - 30/ಪಿ.ಡಬ್ಲೂ -12

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ** -2671/2021

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಹದೇವಯ್ಯಾ |
| ತಂದೆಯ ಹೆಸರು | ಃ | ಗೀರಿಗೌಡ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಎ ಎಸ್ ಐ |
| ವಾಸ ಸ್ಥಳ | ಃ | ಕಾಮಾಕ್ಷಿಪಾಳ್ಯ, ಬೆಂಗಳೂರು |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 31-01-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ವಿದ್ಯಾಗಿರಿ 2020 ಜನೇವರಿ ರಿಂದ 2024 ಮಾರ್ಚ ಬೇಡರಳ್ಳಿ ಬೆಂಗಳೂರು ಪೋಲೀಸ ಠಾಣೆಯಲ್ಲಿ ಎ ಎಸ್ ಐ ಎಂದು ಕಾರ್ಯ ನಿರ್ವಹಿಸಿರುತ್ತೆನೆ.

ದಿಃ 23-11-2021 ರಂದು ಎಸಿಪಿ ವಿಜಯ ನಗರ ಅಪರಾಧ ಪತ್ತೆ ದಳದಲ್ಲಿ ನಾನು ಕೆಲಸ ಮಾಡುತ್ತಿದ್ದೆನು. ಮಾಗಡಿ ರಸ್ತೆ ಪೊಲೀಸ ಠಾಣೆ ಗುನ್ನಾ ಸಂ.158/2020 ಮತ್ತು 169/2020 ಪ್ರಕರಣಗಳ ಆರೊಪಿತರು ಮತ್ತು ಮುದ್ದೆಮಾಲಗಳಿಗೆ ಒಂದು ತಂಡವನ್ನು ರಚಿಸಿದ್ದೇವು. ನಮ್ಮ ಬಾತ್ಮಿದಾರ ಮಾಹಿತಿ ಮೇರೆಗೆ ಆರೊಪಿತರ ಪತ್ತೆಗಾಗಿ ಹುಬ್ಬಳಿ-ಧಾರವಾಢ ಬೇಳಗಾವಿ ಕಡೆ ಬಂದಿದ್ದೇವು. ದಿಃ 26-11-2020 ರಂದು ನಾನು ಚಾಸಾ.32, 29, 19 ಬಂದಿದ್ದೇವು. ಆ ದಿನ ಬೇಳಿಗ್ಗೆ 11.30 ಗಂಟೆಗೆ ಧಾರವಾಡದ ಮಾರುತಿ ದೇವಸ್ಥಾನದ ಸಂಗಮ ಸರ್ಕಲ್ ಬಳಿ ಬಾತ್ಮಿದಾರ ತೋರಿಸಿದ ಮೇರೆಗೆ ಆರೋಪಿ ನಂ. 3 ಮತ್ತು ಲಾಲು ಮತ್ತು ಇಂಜುಮಾಮ ಇರಾನಿ ಅಲ್ಲಿ ಇದ್ದರು. ನಾವು ಅವರನ್ನು ಸುತ್ತುವರೆದು

ಹಿಡಿದುಕೊಂಡೇವು. ಆಗ ಅವರಿಂದ ಸ್ವಲ್ಪ ದೂರದಲ್ಲಿ ಇದ್ದ 1 ನೇ ಆರೋಪಿ ಸಲಿಂ ಕೆಂದ್ರ ಕಾರಾಗ್ರುಹ ಏಸಿ ಅಲ್ಲಿ ಹಾಜರಿರುವ ಆರೋಪಿತ ಏಕಾಏಕಿ ಚಾಕು ಮತ್ತು ಬಿಯರ್ ಬಾಟಲಿಗಳಿಂದ ಹಲ್ಲೆ ಮಾಡಿರುತ್ತಾನೆ ಅದರಿಂದ ಚಾಸಾ.32 ರವರಿಗೆ ಏಡ ಬುಜಕ್ಕೆ ಬಿಯರ್ ಬಾಟಲ ತಾಗಿ ಗಾಯ ವಾಗಿರುತ್ತದೆ ಮತ್ತು ತಲೆಗೆ ರಕ್ತಗಾಯವಾಗಿತ್ತು ಮತ್ತು ಬಲ ಕಣ್ಣಿಗೆ ಪೆಟ್ಟಾಗಿತ್ತು. ಅದೇ ರೀತಿ ಚಾಸಾ.28 ರವರಿಗೆ 1 ನೇ ಆರೊಪಿತನ ಹಲ್ಲೆಯಿಂದ ತಲೆಗೆ ಗಾಯವಾಗಿರುತ್ತದೆ. ಎಲ್ಲಾ ಆರೋಪಿತರು ಸೇರಿ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಆಗ ಅಲ್ಲಿ ಜನರು ಸೇರುತ್ತಾರೆ. ಜನರ ಗುಂಪಿನಲ್ಲಿ ಆರೋಪಿತರು ನಮ್ಮಿಂದ ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ. ಚಾಸಾ.32 ರವರಿಗೆ ಭಾರಿಗಾಯವಾಗಿ ರಕ್ತ ಬರುತ್ತಿದ್ದ ಕಾರಣ ತತ್ವದರ್ಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಾವು ಆರೋಪಿತರಿಗೆ ನಾವು ಬೆಂಗಳೂರ ಪೊಲೀಸರು ಎಂದು ಗುರುತಿನ ಚೀಟಿ ತೋರಿಸಿದರು ಕೂಡಾ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ಕುರಿತು ಎ ಎಸ್ ಐ ರವಿಕುಮಾರ ವಿದ್ಯಾಗಿರಿ ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಅದಾದ ನಂತರ ನಾವು ಬೆಂಗಳೂರಿಗೆ ಮರಳಿ ಹೋಗಿರುತ್ತೆವೆ. 1 ನೇ ಆರೊಪಿತ ಧಾರವಾಡದ ಪೊಲೀಸರು ಬೇರೆ ಪ್ರಕರಣದಲ್ಲಿ ಬಂಧಿಸಿದ್ದರು ಅದರ ಮಾಹಿತಿ ಮೇರೆಗೆ ನಾವು ಮಾಗಡಿ ರಸ್ತೆ ಪೊಲೀಸ ಠಾಣೆ ಗುನ್ನಾ ಸಂ.158/2020 ಮತ್ತು 169/2020 ರ ಪ್ರಕರಣಗಳಲ್ಲಿ ಸದರಿ ಆರೋಪಿತರನ್ನು ಬಾಡಿ ವಾರಂಟ ಮೇಲೆ ಪಡೆದು ನಂತರ ಅವರನ್ನು ನಮ್ಮ ಪೊಲೀಸ ಕಸ್ಟಡಿಗೆ ದಿಃ 02-12-2020 ರಂದು ಪಡೆದುಕೊಂಡಿರುತ್ತೆವೆ. ಅವರ ವಿಚಾರಣೆ ಕಾಲಕ್ಕೆ ಬೆಂಗಳೂರು ನಗರ ಇತರ ಕಡೆ ದರೋಡೆ, ಸುಲಿಗೆ, ಒಂಟಿ ಮಹಿಳೆಯರ ಕತ್ತುಗಳಿಂದ ಸರಗಳ್ಳತನ ಮಾಡಿರುತ್ತೆವೆ ಎಂದು ಓಪ್ಪಿಕೊಂಡಿರುತ್ತಾರೆ. 1 ನೆ ಆರೋಪಿತ ನೀಡಿದ ಮಾಹಿತಿ ಮೇರೆಗೆ ಧಾರವಾಡದ ಇರಾನಿ

ಕಾಲೋನಿಗೆ ನಾನು ಚಾಸಾ.39, 33, ಕೃಷ್ಣಪ್ಪ, ರವಿಕುಮಾರ, ದಿನೇಶ, ಶೀವಕುಮಾರ, ಲಕ್ಷ್ಮಿ, ಪ್ರತಿಭಾ ಇನ್ನಿಬ್ಬರೂ ಮಹಿಳಾ ಸಿಬ್ಬಂದಿಯೊಂದಿಗೆ ಒಟ್ಟು 14 ಜನ ಬಂದಿದ್ದೇವು. ಅಲ್ಲಿ ಅವನು ಇರಾನಿ, ಆಜಾದ ಇರಾನಿ, ಪಾತಿಮಾ ಬೇಗಂ, ಗುಲ್ಜಾ ಬೆಗಮ್, ಬಾನು ರವರನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೆವೆ. ದಿಃ 11-12-2020 ರಂದು ಬೆಂಗಳೂರಿಗೆ ಆರೋಪಿತರ ಸಮೇತ ಹೋಗಿರುತ್ತೆವೆ. ಸದರಿ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಪೊಲೀಸ ಕಸ್ಟಡಿಗೆ ಪಡೆದುಕೊಂಡಿರುತ್ತೆವೆ. ಎಲ್ಲಾ ಆರೋಪಿತರು ಬೆಂಗಳೂರು ನಗರ ಮತ್ತು ಇತರ ಕಡೆ ಕಳ್ಳತನ ಮಾಡಿದ ಬಗ್ಗೆ ಓಪ್ಪಿಕೊಂಡಿರುತ್ತಾರೆ ಮತ್ತು ಧಾರವಾಡದಲ್ಲಿ ಕಳ್ಳತನ, ಸುಲಿಗೆ ಮಾಡಿದ ಒಡವೆಗಳನ್ನು ಧಾರವಾಡದ ಬಂಗಾರವನ್ನು ಮಾರಾಟ ಮಾಡಿದ ಬಗ್ಗೆ ಹೇಳಿರುತ್ತಾರೆ. ನಂತರ ಮೇಲಾಧಿಕಾರ ಸೂಚನೆಯಂತೆ ದಿಃ 17-12-2020 ರಂದು ಪಾತಿಮಾ, ಬಾನು ಇರಾನಿ ಅವರು ಬಂಗಾರದ ಆಭರಣಗಳನ್ನು ಮಾರಾಟ ಮಾಡಿದ ಅಂಗಡಿಗಳನ್ನು ತೋರಿಸುತ್ತೆವೆ ಎಂದು ಹೇಳಿದ ಕಾರಣ ಅವರನ್ನು ಕರೆದುಕೊಂಡು ಮಹಿಳಾ ಪೊಲೀಸ ಸಿಬ್ಬಂದಿಯೊಂದಿಗೆ ಧಾರವಾಡಕ್ಕೆ ಬಂದಿದ್ದೇವು. ದಿಃ 19-12-2020 ರಂದು ಕಾಮಾಕ್ಷಿ ಜುವ್ಯಲರ್ ಅಲ್ಲಿ 230 ಗ್ರಾಂ, ದಿಃ 20-12-2020 ರಂದು ಗಣಪತಿ ಜುವ್ಯಲರಿ ಅಲ್ಲಿ 549 ಗ್ರಾಂ, ಅದೇ ದಿನ ಕೊಯಿನುರ್ ಜುವ್ಯಲರಿ 99 ಗ್ರಾಂ ಆಭರಣಗಳು ರಿಕವರಿ ಆಗಿರುತ್ತವೆ. ದಿಃ 29-12-2020 ರಂದು ವರುಣಾ ಪ್ಯಾಲೇಸ ನಲ್ಲಿ 140 ಗ್ರಾಂ ಆಭರಣಗಳು ರಿಕವರಿ ಆಗಿರುತ್ತವೆ. ದಸ್ತಗಿರಿ ಮಾಡಿದ ಆರೋಪಿತರನ್ನು ರಿಕವರಿ ಮಾಡಿದ ಆಭರಣಗಳನ್ನು ನೋಡಿದರೆ ಗುರುತಿಸುತ್ತೆನೆ. ನಿ.ಪಿ.11 ಮತ್ತು 12 ಪೋಟೋಗಳನ್ನು ಬಂಗಾರದ ಆಭರಣಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಂದರ್ಬದಲ್ಲಿ ತೆಗೆದ ಪೋಟೊಗಳಾಗಿರುತ್ತವೆ. ಆಭರಣಗಳನ್ನು ಅಮಾನತ್ತು ಮಾಡುವ ಕಾಲಕ್ಕೆ ಪಂಚನಾಮೆ

ಮಾಡಿರುತ್ತೆವೆ. ಈಗ ನೋಡುತ್ತಿರುವ ಪೊಟೊ ಜಪ್ತಾದ ಆಭರಣಗಳ ಪಿರ್ಯಾದಿದಾರರ ವಾರಸು ದಾರರಿಗೆ ಹಿಂದಿರುಗಿಸುವ ಸಮಯದಲ್ಲಿ ತೆಗೆಯಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೊಪಿಯನ್ನು ಗುರುತಿಸುತ್ತೆನೆ . ಆರೋಪಿ 3 ಮತ್ತು 4 ರವರ ಗುರುತಿಸುವಿಕೆ ಬಗ್ಗೆ ಅವರ ಪರ ವಕೀಲರು ತಕರಾರು ಇಲ್ಲ ಎಂದಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ವಕೀಲರಿಂದ**

ಪೋಲೀಸ ಅಧಿಕಾರಿ ಶ್ರೀನಿವಾಸ ಚಾಸಾ.39 ರವರು ನಮಗೆ ಆದೇಶ ಮಾಡಿ ಆರೋಪಿತರನ್ನು ಮತ್ತು ಮುದ್ದೇಮಾಲು ಪತ್ತೆಗಾಗಿ ನೇಮಿಸಿದ್ದರು. ನಮಗೆ ಧಾರವಾಡಕ್ಕೆ ಬರಲು ಮೌಖಿಕ ಆದೇಶ ನೀಡಿದ್ದರು. ಮೌಖಿಕ ಆದೇಶ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಿಃ 26-11-2020 ರಂದು ನಾನು ಚಾಸಾ.32, 29, 19 ಬಂದಿದ್ದೇವು. ಆ ದಿನ ಬೇಳಿಗ್ಗೆ 11.30 ಗಂಟೆಗೆ ಧಾರವಾಡದ ಮಾರುತಿ ದೇವಸ್ಥಾನದ ಸಂಗಮ ಸರ್ಕಲ್ ಬಳಿ ಬಾತ್ಮಿದಾರ ತೋರಿಸಿದ ಮೇರೆಗೆ ಬಂದಿದ್ದೇವು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅದೇ ರೀತಿ ಅಲ್ಲಿ ಆರೋಪಿ ನಂ. 3 ಮತ್ತು ಲಾಲು ಮತ್ತು ಇಂಜುಮಾಮ ಇರಾನಿ ಅಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅವರಿಂದ ಸ್ವಲ್ಪ ದೂರದಲ್ಲಿ ಇದ್ದ 1 ನೇ ಆರೋಪಿ ಸಲಿಂ ಇರಾನಿ ಇದ್ದ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಈ ದಿನ ಮೊದಲ ಬಾರಿಗೆ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿತ ಏಕಾಏಕಿ ಚಾಕು ಮತ್ತು ಬಿಯರ್ ಬಾಟಲಿಗಳಿಂದ ಹಲ್ಲೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆ

ವಿಷಯವನ್ನು ಈ ದಿನ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಚಾಸಾ.32 ರವರಿಗೆ ಏಡ ಬುಜಕ್ಕೆ ಬಿಯರ್ ಬಾಟಲ ತಾಗಿ ಗಾಯ ವಾಗಿರುತ್ತದೆ ಮತ್ತು ತಲೆಗೆ ರಕ್ತಗಾಯವಾಗಿತ್ತು ಮತ್ತು ಬಲ ಕಣ್ಣಿಗೆ ಪೆಟ್ಟಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಈ ದಿನ  ಮೊದಲ ಬಾರಿಗೆ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.  ಚಾಸಾ.28 ರವರಿಗೆ  1 ನೇ ಆರೊಪಿತನ ಹಲ್ಲೆಯಿಂದ ತಲೆಗೆ ಗಾಯವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಈ ದಿನ  ಮೊದಲ ಬಾರಿಗೆ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.  ಧಾರವಾಡದಲ್ಲಿ ಸಾಕಷ್ಟು ಆಸ್ಪತ್ರೆಗಳು ಇರುತ್ತವೆ ಎಂದರೆ ಸರಿ. ಚಾಸಾ.32 ರವರಿಗೆ ಭಾರಿಗಾಯವಾಗಿ ರಕ್ತ ಬರುತ್ತಿದ್ದ ಕಾರಣ ತತ್ವದರ್ಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆ ಕುರಿತು ಎ ಎಸ್ ಐ ರವಿಕುಮಾರ ವಿದ್ಯಾಗಿರಿ ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ  ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.  1 ನೇ ಆರೊಪಿತ ಧಾರವಾಡದ ಪೊಲೀಸರು ಬೇರೆ ಪ್ರಕರಣದಲ್ಲಿ ಬಂಧಿಸಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆಸರಿಯಲ್ಲ. ಅದನ್ನು ಇದೆ ದಿನ ಮೊದಲ ಬಾರಿಗೆ ಹೇಳುತ್ತಿದ್ದೆನೆ ಎಂದರೆ ಸರಿಯಲ.  ವಿಚಾರಣೆ ಕಾಲಕ್ಕೆ 1 ನೇ ಆರೋಪಿತರ  ಬೆಂಗಳೂರು ನಗರ ಇತರ ಕಡೆ ದರೋಡೆ, ಸುಲಿಗೆ, ಒಂಟಿ ಮಹಿಳೆಯರ ಕತ್ತುಗಳಿಂದ ಸರಗಳ್ಳತನ ಮಾಡಿರುತ್ತೆವೆ ಎಂದು ಓಪ್ಪಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.  1 ನೆ ಆರೋಪಿತ ನೀಡಿದ ಮಾಹಿತಿ ಮೇರೆಗೆ ಅವರು ಧಾರವಾಡದ ಮತ್ತು ಬೆಂಗಳೂರು ಹಾಗೂ ಇತರ ಕಡೆ ಕಳ್ಳತನ ಮತ್ತು ಸುಲಿಗೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಧಾರವಾಡದಲ್ಲಿ ಕಳ್ಳತನ, ಸುಲಿಗೆ ಮಾಡಿದ ಒಡವೆಗಳನ್ನು ಧಾರವಾಡದ ಬಂಗಾರವನ್ನು ಮಾರಾಟ ಮಾಡಿದ ಬಗ್ಗೆ ಹೇಳಿರುತ್ತಾರೆ. ಮತ್ತು ದಿಃ 17-12-2020 ರಂದು ಪಾತಿಮಾ, ಬಾನು ಇರಾನಿ ಅವರು ಬಂಗಾರದ ಆಭರಣಗಳನ್ನು ಮಾರಾಟ ಮಾಡಿದ ಅಂಗಡಿಗಳನ್ನು ತೋರಿಸುತ್ತೆವೆ ಎಂದು ಹೇಳಿದರು, ಅವರನ್ನು ಕರೆದುಕೊಂಡು ಮಹಿಳಾ ಪೊಲೀಸ ಸಿಬ್ಬಂದಿಯೊಂದಿಗೆ ಧಾರವಾಡಕ್ಕೆ ಬಂದಿದ್ದೇವು, ದಿಃ 19-12-2020 ರಂದು ಕಾಮಾಕ್ಷಿ ಜುವ್ಯಲರ್ ಅಲ್ಲಿ 230 ಗ್ರಾಂ, ದಿಃ 20-12-2020 ರಂದು ಗಣಪತಿ ಜುವ್ಯಲರಿ ಅಲ್ಲಿ 549 ಗ್ರಾಂ, ಅದೇ ದಿನ ಕೊಯಿನುರ್ ಜುವ್ಯಲರಿ 99 ಗ್ರಾಂ ಆಭರಣಗಳು ರಿಕವರಿ ಆಗಿರುತ್ತವೆ, ದಿಃ 29-12-2020 ರಂದು ವರುಣಾ ಪ್ಯಾಲೇಸ ನಲ್ಲಿ 140 ಗ್ರಾಂ ಆಭರಣಗಳು ರಿಕವರಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಪಂಚನಾಮೆ ಮಾಡಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಜಪ್ತಾದ ಆಭಾರಣಗಳಿಗು ಮತ್ತು ಆರೋಪಿತರಿಗು ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಆರೊಪಿತರು ನಮ್ಮ ಮೇಲೆ ಹಲ್ಲೆ ಮಾಡಿದಿದ್ದರು ಕೂಡಾ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 4 ಆರೋಪಿತ ಪರ ವಕೀಲರಿಂದ**

ಆರೊಪಿತರನ್ನು ದಸ್ತಗಿರಿ ಮಾಡಲು ಖಾಸಗಿ ವಾಹನದಲ್ಲಿ ಬಂದಿದ್ದೇವು ಅದರ ಸಂಖ್ಯೆ ನೆನಪಿರುವುದಿಲ್ಲ. ಅದರ ಚಾಲಕನ ಹೆಸರು ನೆನಪಿರುವುದಿಲ್ಲ. ದಿಃ10-12-2020 ರಂದು ಧಾರವಾಡಕ್ಕೆ ಆರೋಪಿತರ ದಸ್ತಗಿರಿಗೆ ಬಂದಿದ್ದೇವು ಸಮಯ ನೆನಪಿರುವುದಿಲ್ಲ.

ಆರೋಪಿತರನ್ನು ದಸ್ತಗಿರಿ ಮಾಡಿದ ಸ್ಥಳದ ಚೆಕ್ ಬಂದಿ ಹೇಳಲು ಆಗುವುದಿಲ್ಲ. ಆರೋಪಿತರನ್ನು ದಸ್ತಗಿರಿ ಮಾಡಿದ ಬಗ್ಗೆ ಸಂಬಂದಿಸಿದ ಠಾಣೆಗೆ ನಮ್ಮ ಮೇಲಾಧಿಕಾರಿ ಮಾಹಿತಿ ನೀಡಿರುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿ ನಾವು ಬಂದಿ ಖಾಸಗಿ ವಾನದಲ್ಲಿ ಕರೆದುಕೊಂಡು ಹೋಗಿರುತ್ತೆವೆ. ಆಭರಣಳನ್ನು ಜಪ್ತು ಮಾಡುವ ಸಮಯಕ್ಕೆ ಆರೊಪಿತರೊಂದಿಗೆ ಬೆಂಗಾವಲಾಗಿ ಬಂದಿದ್ದೇವು. ಆಭರಣಗಳನ್ನು ಜಪ್ತು ಮಾಡಲು ಮೊದಲನೆ ಕಾಮಾಕ್ಷಿ ಬಂಗಾರದ ಅಂಗಡಿಗೆ ದಿಃ 19-12-2020 ರಂದು ಹೋಗಿರುತ್ತೆವೆ ಸಮಯ ನೆನಪಿರುವುದಿಲ್ಲ. ಸದರಿ ಅಂಗಡಿಯ ಚೆಕ್ ಬಂದಿ ಹೇಳಲು ಆಗುವುದಿಲ್ಲ. ಬೇರೆ ಬೇರೆ ಅಂಗಡಿಗಳಾದ ಗಣಪತಿ ಜುವ್ಯಲರ್, ಕೋಯಿನುರ್ ಅಂಗಡಿಗಳಿಗೆ ಜಪ್ತುಗೆ ದಿಃ 20-12-2020 ರಂದು ಮತ್ತು ದಿಃ 21-12-2020 ರಂದು ವರುಣಾ ಪ್ಯಾಲೇಸ ಗೆ ಹೋಗಿರುತ್ತವೆ. ಸಮಯ ನೆನಪಿರುವುದಿಲ್ಲ. ಸದರಿ ಅಂಗಡಿಯ ಚೆಕ್ ಬಂದಿ ಹೇಳಲು ಆಗುವುದಿಲ್ಲ. ಬಂಗಾರದ ಆಭರಣಗಳನ್ನು ಜಪ್ತು ಪಡಿಸಲು ಮೇಲೆ ಹೇಳಿದ ಅಂಗಡಿಗೆ ಹೋಗಿರುವುದಿಲ್ಲ ಆದ ಕಾರಣ ಸಮಯ ಮತ್ತು ಚೆಕ್ ಬಂದಿ ಹೇಳಲು ಆಗುವುದಿಲ್ಲ. ನಾನು ಜಪ್ತು ಕಾಲಕ್ಕೆ ಬಂಗಾರದ ಅಂಗಡಿಗಳ ಒಳಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ಮತ್ತು 12 ಕ್ಕೆ ನನ್ನ ಭಾವಚಿತ್ರ ಇರುವುದಿಲ್ಲ ಎಂದರೆ ಸರಿ. ನಾವು ಆರೊಪಿತರ ಮಾಹಿತಿ ಮೇರೆಗೆ ಬಂಗಾರದ ಆಭರಣಗಳನ್ನು ಜಪ್ತು ಮಾಡಲು ಬಂಗಾರದ ಆಭರಣದ ಅಂಗಡಿಗೆ ಹೋಗಿರುವುದಿಲ್ಲ ಆದ ಕಾರಣ ನಿ.ಪಿ.11 ಮತ್ತು 12 ರಲ್ಲಿ ನಾನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿ ಅವರ ಮಾತು ಕೇಳಿಕೊಂಡು ಪೋಟೊಗಳನ್ನು ಶ್ರುಷ್ಟಿ ಸಿ ಹಾಜರುಪಡಿಸಿರುತ್ತೆವೆ ಎಂದರೆ ಸರಿಯಲ್ಲ. ಮೇಲಾಧಿಕಾರಿ ಅವರ ಮಾತು ಕೇಳಿಕೊಂಡು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಇರವ ಮುದ್ದೇಮಾಲಿಗು ಆರೋಪಿತರಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**3 ಮತ್ತು 4 ನೇ ಆರೊಜಪಿತ ಪರ ವಕೀಲರು 1 ನೇ ಆರೊಪಿತನ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**2 ನೇ ಆರೊಜಪಿತ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಪಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.